3) ಕುಶಾವತಿ ಬಡಾವಣೆ

4) ಕೋಳಿಕಾಲು ಗುಡ್ಡ

5) ಬೆಟ್ಟಮಕ್ಕಿ ಹೊಸ ಬಡಾವಣೆ

ಅ) ಕುರುವಳ್ಳಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ 1996-97ನೇ ಸಾಲಿನಲ್ಲಿ 1.00 ಲಕ್ಷ ರೂ.ಗಳಿಂದ 'ಯು' ಆಕಾರದ ಚರಂಡಿ, ಜಲ್ಲಿ ರಸ್ತೆ, ಬೀದಿ ದೀಪ, ಕಾಮಗಾರಿಗಳನ್ನು ಕೈಗೊಂಡಿದ್ದು ಪೂರ್ಣಗೊಳಿಸಲಾಗಿದೆ ಹಾಗೂ 1997-98ನೇ ಸಾಲಿನಲ್ಲಿ 1.00 ಲಕ್ಷ ರೂಗಳಿಂದ ಮಳೆ ನೀರಿನ ಚರಂಡಿ ಕೆಲಸ ತೆಗೆದುಕೊಂಡಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ. ಉಳಿದ ಕೊಳಚೆ ಪ್ರದೇಶಗಳು ಈಗಷ್ಟೆ ತಾನೆ ಘೋಷಣೆಯಾಗಿರುತ್ತದೆ.

ಇ) ರಾಷ್ಟ್ರೀಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಈ ಕೊಳಚೆ ಪ್ರದೇಶಕ್ಕೆ 1997-98ನೇ ಸಾಲಿನಲ್ಲಿ 6.75 ಲಕ್ಷ ರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಸಮುದಾಯ ಭವನ ಹಾಗೂ ಮಳೆನೀರಿನ ಚರಂಡಿ ತೆಗೆದುಕೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿದೆ. ಈ ಕೊಳಚೆ ಪ್ರದೇಶವು ಇತ್ತೀಚೆಗಷ್ಟೆ ಘೋಷಣೆಯಾದುದರಿಂದ ಕಾಮಗಾರಿ ಪ್ರಾರಂಭಿಸಲು ವಿಳಂಬವಾಯಿತು.

ಮಾಗಡಿ ಕ್ಷೇತ್ರದಲ್ಲಿ ಅನಧಿಕೃತ ಕ್ರಷರ್‌ಗಳ ಬಗ್ಗೆ

602 - ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು? ಯಾವುವು? (ಕ್ರಷರ್‌ಗಳು ನಡೆಯುತ್ತಿರುವ ಸ್ಥಳ, ನಡೆಸುತ್ತಿರುವವರ ಸಹಿತ ಸಂಪೂರ್ಣ ಮಾಹಿತಿ ನೀಡುವುದು)

ಆ) ಇವುಗಳಲ್ಲಿ ಅನಧಿಕೃತವಾಗಿ ನಡೆಯುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು? ಯಾವುವು? (ಪೂರ್ಣ ವಿವರ ನೀಡುವುದು)

ಇ) ಈ ಅನಧಿಕೃತ ಕ್ರಷರ್‌ಗಳಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟದ ಪ್ರಮಾಣವೆಷ್ಟು? ಇವುಗಳನ್ನು ನಿಲ್ಲಿಸಲು ಸರ್ಕಾರದ ಕ್ರಮವೇನು?

ಈ) ಈ ಕ್ರಷರ್‌ಗಳಿಂದ ಭಾರೀ ಮೊತ್ತದ ವಿದ್ಯುತ್ ಶುಲ್ಕದ ಬಾಕಿ ಬರಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಇದರ ಒಟ್ಟು ಮೊತ್ತವೆಷ್ಟು?

ಊ) ಈ ಶುಲ್ಕವನ್ನು ವಸೂಲು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕೆ ಸಚಿವರು) :

ಅ) 11 (ಸಂಪೂರ್ಣ ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ).

ಆ) ಸಣ್ಣ ಪ್ರಮಾಣದ ಕೈಗಾರಿಕೆಗಳ ನೋಂದಣಿಯನ್ನು ಕಡ್ಡಾಯಗೊಳಿಸಲಾಗಿರುವುದಿಲ್ಲ. ಕೈಗಾರಿಕಾ ಇಲಾಖೆಯಲ್ಲಿ ನೋಂದಾವಣೆ ಮಾಡಿಕೊಳ್ಳದೆ ಕಲ್ಲುಪುಡಿ ಮಾಡುವ ಘಟಕಗಳನ್ನು ನಡೆಸುತ್ತಿದ್ದರೂ ಅದನ್ನು ಅಕ್ರಮ ಘಟಕಗಳೆಂದು ಪರಿಗಣಿಸಲಾಗುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಬಂದಿದೆ.

ಉ) ರೂ.4,14,146-00 ವಿದ್ಯುತ್ ಬಿಲ್ಲುಗಳ ಬಾಕಿ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾಗಿದೆ.

ಊ) ಬಾಕಿ ಹೊಂದಿರುವ ಕ್ರಷರ್‌ಗಳ ವಿದ್ಯುತ್ ಸಂಪರ್ಕವನ್ನು ಬಂದ್ ಮಾಡಿ (ಡಿಸ್ ಕನೆಕ್ಷನ್) ಕೆ.ಇ.ಬಿ. (ರೆಕವರಿ ಆಫ್ ಡ್ಯೂಸ್) ಆಕ್ಟ್ 1976 ಮತ್ತು ರೂಲ್ಸ್‌ಗಳ ಪ್ರಕಾರ ವಿದ್ಯುತ್ ಬಾಕಿಯನ್ನು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅನುಬಂಧ

ಮಾಗಡಿ ತಾಲ್ಲೂಕಿನ ಜಲ್ಲಿ ಕ್ರಷಿಂಗ್ ಚಟುವಟಿಕೆಗೆ ತಾತ್ಕಾಲಿಕ ನೋಂದಣಿ ಪ್ರಮಾಣ ಪತ್ರ ಪಡೆದಿರುವ ಘಟಕಗಳ ಪಟ್ಟಿ.

ಕ್ರ. ಸಂ.	ಹೆಸರು ಮತ್ತು ವಿಳಾಸ	ನೋಂದಣಿ ಸಂಖ್ಯೆ ಮತ್ತು ದಿನಾಂಕ
1	2	3
1.	ಮೆ. ಆಶಾ ಗ್ರಾನೈಟ್ ಕ್ರಷರ್ ಮಾಲೀಕರು. ರಮೇಶ್ ಬಿ.ಪಿ. ಸುಭಾಷ್‌ನಗರ, ಹಳ್ ಟಿ.ಬಿ. ರೋಡ್, ನೆಲಮಂಗಲ, ಬೆಂಗಳೂರು ಜಿಲ್ಲೆ.	08:20:02773:ಪಿಆರ್‌ಒವಿ: ಎಸ್‌ಎಸ್‌ಐ ದಿನಾಂಕ : 16-3-92 ಘಟಕ :- ಬಸವನಹಳ್ಳಿ, ಮಾಗಡಿ ತಾ:
2.	ಮೆ.ಮೆಹ್ತಾ ಮಿನರಲ್ಸ್ ಅಂಡ್ ಮೈನ್ಸ್ ಮಾಲೀಕರು, ಮೆಜರ್ ಡಿ. ಆರ್.ಎಸ್. ಮೆಹ್ತಾ, ನಂ.3332, ಹೆಚ್.ಎ.ಎಲ್. 2ನೇ ಸ್ಟೇಜ್, ಇಂದ್ರಾನಗರ, ಬೆಂಗಳೂರು - 38.	08:20:02885:ಪಿಆರ್‌ಒವಿ: ಎಸ್‌ಎಸ್‌ಐ ದಿನಾಂಕ : 6-6-92 ಘಟಕ :- ಸಂ.ನಂ. 45, ಬಸವನಹಳ್ಳಿ, ಮಾಗಡಿ ತಾ:

1	2	3
3.	ಎನ್.ಎಲ್.ಎನ್.ಕ್ರಷರ್ಸ್ ಅಂಡ್ ಕನ್ಸ್ಟ್ರಕ್ಷನ್ ಪ್ರೈ.ಲಿ. ನಂ. 292, ನಾರಾಯಣ ಪಿಳ್ಳೈ ಸ್ಟ್ರೀಟ್, ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.	08:20:ಬಿ-00425:ಪಿಆರ್ ಒವಿ: ಎಸ್ಎಸ್ಐ ದಿನಾಂಕ : 29-2-96 ಡೇಮಾರನಹಳ್ಳಿ, ಮಾಗಡಿ ತಾ:
4.	ಮೆ: ಭೈರವೇಶ್ವರ ಎಂಟರ್ಪ್ರೈಸಸ್, ವಿ.ಎಲ್.ಭೈರಲಿಂಗೇಶ, ನಂ. 13, 2ನೇ ಸ್ಟೇಜ್, 1ನೇ ಮುಖ್ಯ, ಬಸವೇಶ್ವರನಗರ, ಬೆಂಗಳೂರು.	08-20:ಬಿ-00533:ಪಿಆರ್ಒವಿ: ಎಸ್ಎಸ್ಐ ದಿನಾಂಕ : 22-7-96 ಘಟಕ :- ಸಂ.ನಂ. 6, ವಾಜರಹಳ್ಳಿ, ಮಾಗಡಿ ತಾ.
5.	ಫೋಬ್ಸ್ ಅಗ್ರಗೇಟ್ಸ್ ಪ್ರೈ.ಲಿ., ನಂ.12, ಬ್ರಿನಾವನ್ಲೇ ಔಟ್, ವಿಜಿನಪುರ, ಬೆಂಗಳೂರು-16.	08:20:ಬಿ-00656:ಪಿಆರ್.ಒವಿ: ಎಸ್ಎಸ್ಐ ದಿನಾಂಕ : 31-1-97, ಘಟಕ :- ಕೋಮಗಲಹಳ್ಳಿ, ಮಾಗಡಿ ತಾ.
6.	ಮೆ ಬಿಲ್ಡಿಂಗ್ ಮೊಟೀರಿಯಲ್ ಸಪ್ಲೈಯರ್ಸ್, ಬೆಂಗಳೂರು, ನಂ. 26, ಎ:2, ಸ್ಯಾಂಕಿ ರಸ್ತೆ, ಬೆಂಗಳೂರು - 52.	08:20:ಬಿ-00681:ಪಿಆರ್ಒವಿ: ಎಸ್ಎಸ್ಐ ದಿನಾಂಕ : 4-3-97 ಘಟಕ :- ಬಸವನಹಳ್ಳಿ, ಮಾಗಡಿ ತಾ.
7.	ಮೆ. ಗ್ರಾಯತ್ರಿ ಎಂಟರ್ಪ್ರೈಸಸ್, ಜಿ.ವಿಜಯಕುಮಾರ್, ಸ.ನಂ. 26, ಗೋರೂರು ಗ್ರಾಮ, ಮಾಗಡಿ ತಾಲ್ಲೂಕು.	08:20:ಬಿ-00248:ಪಿಆರ್ಒವಿ: ಎಸ್ಎಸ್ಐ ದಿನಾಂಕ : 31-3-97.
8.	ಮೆ. ಶ್ರೀನಿವಾಸ ಎಂಟರ್ಪ್ರೈಸಸ್, ಕೆ. ಯುವಕುಮಾರ್, ಸ.ನಂ. 26, ಗೊರೂರು ಗ್ರಾಮ, ಮಾಗಡಿ ತಾಲ್ಲೂಕು.	08:20:ಬಿ-00245:ಪಿಆರ್ಒವಿ : ಎಸ್ಎಸ್ಐ ದಿನಾಂಕ : 25-3-97
9.	ಈಶ್ವರಿ ಗ್ರಾನೇಟ್ಸ್. ಪಿ. ರಾಜಕುಮಾರ್, ನಂ.ಕೆ-18, ಪಿ.ವಿ.ಆರ್.ರಸ್ತೆ, ಕಾಟನ್ ಪೇಟೆ ಮುಖ್ಯ ರಸ್ತೆ ಕ್ರಾಸ್, ಬೆಂಗಳೂರು	08:20:ಬಿ-00534:ಪಿಆರ್ಒ.ವಿ: ಎಸ್ಎಸ್ಐ ದಿನಾಂಕ : 22-7-96 ಘಟಕ : ಸ.ನಂ.6, ವಾಜರಹಳ್ಳಿ, ಮಾಗಡಿ ತಾ:

1	2	3
10.	ಮೆ. ಎಸ್.ಎಲ್.ಎನ್.ಸ್ಟೋನ್ ಕ್ರಷಿಂಗ್ ಅಂಡ್ ಬ್ರಿಕ್ ವರ್ಕ್ಸ್, ಹನಮಂತರಾಯಪ್ಪ ಬಿನ್ ಲೇ ಚಿಕ್ಕಹನುಮಯ್ಯ ಶೆಟ್ಟಿಪಾಳ್ಯ, ಗರ್ಗೇಶ್ವರ ಪುರ ಸೋಲೂರು ಹೋಬಳಿ, ಮಾಗಡಿ ತಾ:	08:20:ಬಿ-00522:ಪಿಆರ್ಓವಿ: ಎಸ್ಎಸ್ಐ ದಿನಾಂಕ : 8-7-96 ಘಟಕ : ಸ.ನಂ.72, ಗರ್ಗೇಶ್ವರಪುರ
11.	ಮೇ. ಆಶಾ ಗ್ರಾನೈಟ್ಸ್ ಕ್ರಷರ್ಸ್ ಬಿ.ಪಿ. ರಮೇಶ ಬಿನ್.ಬಿ. ಪುಟ್ಟಮಾರಯ್ಯ ನಂ. 3083, ಸುಬಾಶ್ನಗರ, ನೆಲಮಂಗಲ	08:20:ಬಿ-00508:ಪಿಆರ್ಓವಿ: ಎಸ್ಎಸ್ಐ ದಿನಾಂಕ : 27-6-96 ಘಟಕ : 35:2, ಬಸವನಹಳ್ಳಿ, ಮಾಗಡಿ ತಾ:

ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ದೇವಸ್ಥಾನಗಳಿಗೆ ಹಣ ಬಿಡುಗಡೆ

603 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿರುವ ದೇವಸ್ಥಾನಗಳ ದುರಸ್ಥಿ, ನವೀಕರಣ ಮತ್ತು ಪುನರ್ ನಿರ್ಮಾಣಕ್ಕೆ1994-95, 1995-96, 1996-97 ಮತ್ತು1997-98ರ ಸಾಲಿನಲ್ಲಿ ಬಿಡುಗಡೆ ಆದ ಹಣವೆಷ್ಟು?*

ಆ) *ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು)?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ವರ್ಷ	
1994-95	2,00,000-00
1995-96	1,60,000-00
1996-97	60,000-00
1997-98	ಈ ಸಾಲಿಗೆ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡುವ ಹಂತದಲ್ಲಿದೆ.

ಆ) (ವಿವರದ ಪಟ್ಟಿ ಲಗತ್ತಿಸಿ).